# ಸ್ವಾತಂತ್ರ್ಯ ಹೋರಾಟ ಸಂದರ್ಭದ ನವೋದಯ ಕವನಗಳಲ್ಲಿ ಗಾಂಧೀಜಿ ಚಿತ್ರಣ

**ವಿಜಯ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ವೈ.ಎಂ.ಎಂ. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಯಳಂದೂರು, ಚಾಮರಾಜನಗರ.

**Received: 24-11-2023 ; Acepted: 24-03-2024 ; Published: 13-08-2024**

**DOI: https://doi.org/10.5281/zenodo.13294388**

**ABSTRACT:**

ಸಾವಿರ ಸಾವಿರ ಸಾಮಾನ್ಯರ ನಡುವೆ ಸಾವಿರ ಅಸಾಧಾರಣರು ಅಲ್ಲಿ ಇಲ್ಲಿ ಬಂದು ಹೋಗುತ್ತಾರೆ. ಅಂತಹ ಜನರು ಜಗತ್ತಿನಲ್ಲಿ ತಮ್ಮ ಹೆಸರನ್ನು ದಾಖಲಿಸುತ್ತಾರೆ. ಮನುಕುಲದ ಇತಿಹಾಸದಲ್ಲಿ ಎಲ್ಲರೂ ಬುದ್ಧನಂತೆ ಶಾಶ್ವತ ವೈಭವಕ್ಕೆ ಅರ್ಹರಾಗುವುದಿಲ್ಲ! ಎಲ್ಲರೂ ಬಸವಣ್ಣನವರಂತೆ ತಮ್ಮ ಗುರುತು ಬಿಡುವುದಿಲ್ಲ! ಎಲ್ಲರೂ ಮಹಾತ್ಮರಲ್ಲ! ತಮ್ಮ ವ್ಯಕ್ತಿತ್ವ ಹಾಗೂ ವಿಚಾರಧಾರೆಯಿಂದ ಇಡೀ ಜಗತ್ತಿನ ಜನರನ್ನು ಸೆಳೆದ ಮಹಾನ್ ಚೇತನ. ಮೋಹನ್ ದಾಸ್ ಕರಮಚಂದ್ ಗಾಂಧಿ, ಅಂತಹ ಅಪರಿಮಿತ ಪ್ರಭಾವದಲ್ಲಿ ಅನನ್ಯ. ಕನ್ನಡ ಕವಿಗಳು ಮಹಾತ್ಮಾ ಗಾಂಧಿಯನ್ನು ಅಪರೂಪದ ವ್ಯಕ್ತಿ ಎಂದು ಕರೆಯುತ್ತಾರೆ. ಅದರಲ್ಲೂ ಸ್ವಾತಂತ್ರ್ಯಪೂರ್ವದ ನವೋದಯ ಕವಿಗಳು ಹೇಗೆ ಬಣ್ಣಿಸಿದರು ಎಂಬುದನ್ನು ದಾಖಲಿಸುವ ಸಣ್ಣ ಪ್ರಯತ್ನ ಈ ಬರಹ.

**KEYWORDS:**

ಮಹಾತ್ಮ , ಸಮಾನತೆ, ಹಿಂದುಸ್ಥಾನ, ಸತ್ಯಾಗ್ರಹಿ, ಖಾದಿಯ ಹಾಡು, ಸ್ವಾತಂತ್ರ್ಯ ಸಮರ, ನವೋದಯ, ರಾಷ್ಟ್ರೀಯತೆ.

ಸ್ವಾತಂತ್ರ್ಯಪೂರ್ವದ ಕಾಲ ಮುಖ್ಯವಾಗಿ ಸ್ವಾತಂತ್ರ್ಯೋತ್ಸಾಹದ ಕಾಲ. ಈ ಅವಧಿಯಲ್ಲಿ ಬರೆದ ಯಾರೇ ಲೇಖಕರಾಗಲಿ ಅವರು ರಾಷ್ಟ್ರೀಯ ಭಾವನೆ - ಸ್ವಾತಂತ್ರ್ಯ ಪಡೆಯುವ ಭಾವನೆಯಿಂದ ಅನ್ಯರಾಗಿ ಉಳಿಯುವುದು ಅಸಾಧ್ಯವಾಗಿತ್ತು. ಸ್ವಾತಂತ್ರ್ಯ ಪೂರ್ವದ ನವೋದಯದ ಕವಿಗಳಲ್ಲೂ ರಾಷ್ಟ್ರಪ್ರೇಮದ ಅಭಿವ್ಯಕ್ತಿಯಿತ್ತು. ಗಾಂಧಿ, ತಿಲಕ್, ಪಟೇಲ್, ಸುಭಾಷ್ ಮುಂತಾದ ಮುಂಚೂಣಿಯ ರಾಷ್ಟ್ರನಾಯಕರ ನೇತೃತ್ವದಲ್ಲಿ ಭಾರತದ ಉದ್ದಗಲಕ್ಕೂ ವ್ಯಾಪಿಸಿದ್ದ ಸ್ವಾತಂತ್ರ್ಯ ಚಳವಳಿಯು ಕನ್ನಡದ ಕವಿಗಳನ್ನು ಗಾಢವಾಗಿ ಪ್ರಭಾವಿಸಿದುದು ಆಶ್ಚರ್ಯದ ಸಂಗತಿಯೇನಲ್ಲ. ತಾಯಿಯನ್ನು ಪ್ರೀತಿಸುವುದು, ತಾಯಿನಾಡನ್ನು ಪ್ರೀತಿಸುವುದು. ನಾಗರೀಕ ಮನುಷ್ಯನಾಗಿ ಉಸಿರಾಡುವಷ್ಟೇ ಸಹಜವೆಂಬಂತೆ. ದಾಸ್ಯದ ಬಿಡುಗಡೆಗೆ ಸಂಕಲ್ಪ ತೊಟ್ಟಂತಹ ಧೀಮಂತ ದೀಶಕ್ತಿಯ ಪ್ರತೀಕಗಳಾಗಿ ಸರ್ವ ಭಾರತೀಯರ ಮನದಂಗಳದಿ ವಿರಾಜಮಾನರಾಗಿದ್ದ ಅಂದಿನ ಎಲ್ಲರ ಸಚೇತಕ ಶಕ್ತಿಯಾದ ಗಾಂಧೀಜಿಯವರ ವ್ಯಕ್ತಿತ್ವ ಆರಂಭದ ಕನ್ನಡ ಕವಿಗಳಿಗೆ ಹೇಗೆ ಗೋಚರಿಸಿರಬಹುದು. ಅದರಿಂದ ಪ್ರಭಾವಿತರಾದ ಅಸಂಖ್ಯಾತ ಕನ್ನಡ ಕವಿಗಳು

ಅವರನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಹೇಗೆ ಚಿತ್ರಿಸಿರಬಹುದು ಎಂಬ ವಿಚಾರಗಳನ್ನು ಈ ಅಧ್ಯಾಯದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಅವರ ವ್ಯಕ್ತಿತ್ವದ ಅನಾವರಣವನ್ನು ಹೇಗೆ ಹಲವು ಬಗೆಗಳಲ್ಲಿ ಮಾಡಿರಬಹುದು ಎಂಬುದನ್ನು ತಿಳಿಯಬಹುದಾಗಿದೆ. ಗಾಂಧೀ ಮಹಾತ್ಮನ ವ್ಯಕ್ತಿತ್ವದ ಅವಲೋಕನವೇ ಕನ್ನಡ ನವೋದಯ ಕಾವ್ಯದಲ್ಲಿ ಹೆಪ್ಪುಗಟ್ಟಿದೆ. ಗಾಂಧೀಜಿಯವರನ್ನು ಕುರಿತು ಬರೆಯದ ರಮ್ಯ ಕವಿಯೇ ಇಲ್ಲವೇನೋ! ಎನ್ನುವಷ್ಟರ ಮಟ್ಟಿಗೆ ಗಾಂಧೀಜಿಯವರ ವ್ಯಕ್ತಿತ್ವ ಕನ್ನಡ ಕವಿಗಳನ್ನು ಪ್ರಭಾವಿಸಿದೆ. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ನವೋದಯ ಕವಿಗಳಾದ ಗೋವಿಂದ ಪೈ, ಡಿ.ವಿ.ಜಿ., ಮಾಸ್ತಿ, ಪು.ತಿ.ನ., ಸಾಲಿ ರಾಮಚಂದ್ರರಾಯರು, ಪಂಜೆ, ಬೇಂದ್ರೆ, ಆನಂದಕಂದ, ಬೆಳಗೆರೆ ಜಾನಕಮ್ಮ , ಕುವೆಂಪು ಮುಂತಾದ ಕವಿಗಳ ಕಾವ್ಯಕ್ಕೆ ಗಾಂಧೀಜಿ ಪ್ರೇರಕ ಶಕ್ತಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಸರಳ ವ್ಯಕ್ತಿತ್ವ , ಕಡ್ಡಿಯಂಥ ಮೈ, ಬೋಳುತಲೆ, ಅಗಲ ಕಿವಿ, ಚಾಳೀಸು ಹುಟ್ಟುನಗೆ, ಅರೆಬೆತ್ತಲ ಫಕೀರನಂತೆ ಪೋಷಾಕು, ಕನ್ನಡಿ ಹರಳಿನಂಥ ನೇರಮಾತು, ನೇರ ನಡೆ, ಅಂತರಂಗದ ಧ್ವನಿ ಅಂತ ಹೇಳಿ ಅದನ್ನೇ ಸಾರ್ವಜನಿಕ ಅಭಿಪ್ರಾಯವಾಗಿ ಮಾರ್ಪಡಿಸಬಲ್ಲ ಮೋಡಿಗಾರ. ಉಪವಾಸ, ಗಿಪವಾಸ ಅಂತ ಹಟಕ್ಕೆ ಬಿದ್ದು ತನ್ನದನ್ನು ಸಾಧಿಸಿಕೊಳ್ಳಬಲ್ಲ ಛಲಗಾರ. ಹೀಗೆ ಗಾಂಧೀಯವರ ಹಲವು ಬಗೆಯ ವ್ಯಕ್ತಿತ್ವಗಳು ಕನ್ನಡ ಕವಿಗಳ ಕವನಗಳಲ್ಲಿ ದಾಖಲಾಗಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೆಲವರಿಗೆ ಗಾಂಧೀಜಿ, ಆದರ್ಶದ ಪ್ರತೀಕವಾದರೆ ಮತ್ತೆ ಕೆಲವರಿಗೆ ಚೇತನದ ಚಿಲುಮೆ. ಕೆಲವರಿಗೆ ಆರಾಧನಾ ಭಾವದ ಸಂಕೇತವಾದರೆ ಕೆಲವರಿಗೆ ಸ್ವಾತಂತ್ರ್ಯ ಪುರುಷ, ಹಲವರಿಗೆ ಮೌಲ್ಯಗಳ ಗಣಿಯಾದರೆ, ಮತ್ತಲವರಿಗೆ ಸಮಾನತೆಯ ಹರಿಕಾರರಾಗಿ ಗಾಂಧೀ ಗೋಚರಿಸಿದ್ದಾರೆ.

ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ನವೋದಯದ ಆರಂಭದ ಅಥವಾ ಸ್ವಾತಂತ್ರ್ಯಪೂರ್ವ ನವೋದಯ ಕವಿಗಳಲ್ಲಿ ಪೇಜಾವರ ಸದಾಶಿವರಾಯರು ಒಬ್ಬರು. ಅವರು ತಮ್ಮ ಕವನದಲ್ಲಿ ಗಾಂಧೀಜಿಯವರನ್ನು ಸ್ವಾತಂತ್ರ್ಯ ಭೈರವನಾಗಿ ಚಿತ್ರಿಸಿದ್ದಾರೆ. ಗಾಂಧೀಜಿಯವರು ಸ್ವಾತಂತ್ರ್ಯ ಸಂಗ್ರಾಮದ ಚುಕ್ಕಾಣಿ ಹಿಡಿದ ದಿನಗಳಲ್ಲಿ ಬರೆದಂತೆ ಕಾಣುವ ಈ ಕವನದಲ್ಲಿ ಗಾಂಧೀಜಿಯವರ ನೋಟ, ನಡೆ, ಮಾತು ಮುಂತಾದವುಗಳ ತೀವ್ರತೆಯನ್ನು ಅದ್ಭುತವಾಗಿ ಕವಿ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

**ನಿನ್ನ ಗುಡುಗಿನ ನಡೆಗೆ ಧರೆಯು ಬಿರಿಯುವುದು**
**ನಿನ್ನ ತಂಬಟೆ ಸರಕೆ ದಾಸ್ಯ ಹರಿಯುವುದು**
**ಸ್ವಾತಂತ್ರ್ಯ ಭೈರವನೆ ನಿನ್ನಮರ ಕರೆಗೆ**
**ಮಾಂತ್ರಿಕರ ಮತವು ತಲೆವಾಗುವುದು ಕೆಳಗೆ**

(ಮರೆಯಲಾಗದ ಬರಹಗಾರರು. ಪೇಜಾವರ ಸದಾಶಿವರಾಯ. ಸಾಹಿತ್ಯವಾಚಿಕೆ. ಪು.ಸಂ. 31)

ಎಂದೆಲ್ಲಾ ಗಾಂಧೀಜಿಯವರನ್ನು ಚಿತ್ರಿಸಿದ ಕವಿ ಮನ ಮುಂದುವರಿದು:

**ಬಂಧನದ ಬಲೆ ಹರಿವ ಆಯುಧವ ತಾರ**
**ದಾಸ್ಯಬೇಡಿಯ ಮುರಿವ ಭೈರವನೆ ಬಾರ |**

(ಮರೆಯಲಾಗದ ಬರಹಗಾರರು. ಪೇಜಾವರ ಸದಾಶಿವರಾಯ. ಸಾಹಿತ್ಯವಾಚಿಕೆ. ಪು.ಸಂ. 31)

ಎಂದು ತಮ್ಮ 'ಸ್ವಾತಂತ್ರ್ಯ ಭೈರವ' ಕವನದಲ್ಲಿ ಗಾಂಧೀಜಿ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಗಾಂಧೀಜಿಯವರು ಯಾವುದೇ ನಿಶ್ಚಿತ ಸಿದ್ಧಾಂತಕ್ಕೆ ಬದ್ಧರಾಗದೆ ಚಿಂತನೆ ಮತ್ತು ಕ್ರಿಯೆಗಳಲ್ಲಿ ಸತತ ಪ್ರಯೋಗಗಳನ್ನು ನಡೆಸುತ್ತ ಸಾಗಿದ ಸತ್ಯಶೋಧಕರೆಂದು ಡಿ.ವಿ.ಜಿ. ಅವರು ಅವರ ಚಿಂತನೆಗಳನ್ನು ಕುರಿತು ವಿವರಿಸಿದ್ದಾರೆ. ಮಾನವ ಸಮುದಾಯದಲ್ಲಿನ 'ದ್ವೇಷ' ಹಿಂಸೆಗಳನ್ನು ಪ್ರೇಮ ಹಾಗೂ ಅಹಿಂಸೆಗಳಿಂದ ಗೆಲ್ಲಬೇಕು ಎಂಬಂತಹ ವ್ಯಕ್ತಿತ್ವ ಗಾಂಧೀಜಿಯವರದಾಗಿತ್ತು ಎಂಬ ಅಂಶವನ್ನು ಅವರ 'ಸಾಧುಗಾಂಧಿ' ಕವನದಲ್ಲಿ ಎಳೆಎಳೆಯಾಗಿ ಬಿಡಿಸಿದ್ದಾರೆ.

**ಸರ್ವಸಮತೆಯ ಗಳಿಸಿ ಶಮವನರಸಿ**
**ಸ್ವಾತ್ಮ ಶಿಕ್ಷಣಮೇ ಸ್ವರಾಜ್ಯ ಮೆನ್ನುತ ವಚಿಸಿ**
**ದೇಶಸೇವೆಯನೀಶ ಸೇವೆಯೆನಿಸಿ ||**
**ಸಾಧುವರ ವೃತ್ತಿಯಂ ತನ್ನೊಳೆ ಜಗಕೆ ತೋರಿ |**
**ಐಹಿಕಾರ್ಥಗಳಾರ್ಥ್ಯಮಂ ವಿಶದ ಬಡಿಸಿ**
**ಪಾಶ್ಚಾತ್ಯ ಜನಕಮತಿ ವಿಮಲ ನೀತಿಯನು ಪೇಳ್ವಾ|**
**ದೈವ ಸಂಪನ್ಮಾರ್ಗದರ್ಶಕಂ ಗಾಂಧಿಯಷ್ಟೇ ||**

ಎಂದು ಅವರ ವ್ಯಕ್ತಿತ್ವದ ಸಂಪೂರ್ಣ ಚಿತ್ರಣವನ್ನೇ ಡಿ.ವಿ.ಜಿ. ಇಲ್ಲಿ ಚಿತ್ರಿಸಿದ್ದಾರೆ. ಗಾಂಧೀಜಿಯವರಿಗೆ ಸತ್ಯ ಮತ್ತು ದೇವರು ಎರಡೂ ಒಂದೇ. ಜೊತೆಗೆ ಸರ್ವರ ಉದಯವನು ಬಯಸಿದ ಮಹಾಮಹಿಮರು ಗಾಂಧೀಜಿ. ಉದಾತ್ತ ಚಿಂತನೆಯ ಸಾಕಾರ ಮೂರ್ತಿ, ದೇಶಸೇವೆಯೇ ಈಶಸೇವೆಯೆನಿಸಿ ಬದುಕಿದವರು, ತಮ್ಮ ಜೀವನವನ್ನೇ ಸಂದೇಶವಾಗಿಸಿದವರು ಇತ್ಯಾದಿಯಾಗಿ ಅವರ ವ್ಯಕ್ತಿತ್ವವನ್ನು ಹಿರಿಯ ಕವಿಯ ಭಾವ ಚಿತ್ರಿಸಿದೆ. ಬಲವನ್ನೆ ಬಳಸುವುದು ದುಷ್ಟತನ; ನ್ಯಾಯವನ್ನು ಪಡೆಯಲೂ ಅದರ ಬಳಕೆಯನ್ನು ನಿಷೇದಿಸಬೇಕೆಂಬುದು ಅವರ ನಿಶ್ಚಲ ನಂಬಿಕೆಯಾಗಿತ್ತು. ಈ ನಂಬಿಕೆಗೆ ಅವರು ತಮ್ಮ ಸಂಪೂರ್ಣ ಬದುಕನ್ನು ಅರ್ಪಿಸಿಕೊಂಡರು. ತಮ್ಮ ಹೃದಯ ಮತ್ತು ಆತ್ಮದಲ್ಲಿ ಈ ನಂಬಿಕೆಯನ್ನಿರಿಸಿಕೊಂಡರು ಗಾಂಧೀಜಿ. ಈ ಮೂಲಕ ಅವರು ಬೃಹತ್ ಭಾರತವನ್ನು ವಿಮೋಚನೆಯೆಡೆಗೆ ಮುನ್ನಡೆಸಿದವರು. ಈ ನಿಲುವುಗಳ ಸಾಕಾರ ರೂಪವಾಗಿ ಬಾಳಿ ಬದುಕಿದವರು ಗಾಂಧೀಜಿ ಎಂದು ಗಾಂಧೀಜಿಯವರ ವ್ಯಕ್ತಿತ್ವದ ದರ್ಶನ ಮಾಡಿಸುತ್ತದೆ. ಮಾಸ್ತಿಯವರ "ಗಾಂಧೀಜಿಯವರ ದರ್ಶನ" ಕವನ

**'ಎಳೆಯ ಮಗುವಿನ ಮೊಗದ**
**ನಗೆಯಿಹುದು ಮೊಗದೆ.**
**ಇಳೆಯರಸರಿಗೆ ಬರದ**

**ಬಗೆಯ ಗಾಂಭೀರ್ಯ'**

ಗಾಂಧೀಯವರು ಎಳೆಯ ಮಗುವಿನ ಹಾಗೆ. ಮುಗ್ಧ ಮುಖ ಅಲ್ಲೊಂದು ಮಕ್ಕಳ ನಗೆ. ಆದರೆ ಭರತಖಂಡದ ಅರಸರಿಗಿಲ್ಲದ ಗಾಂಭೀರ್ಯ ಇವರಿಗೆ ಎನ್ನುವ ಮಾಸ್ತಿಯವರು.

**ಇವನ ಧರಿಸಿದ ಭೂಮಿ**
**ಪುಣ್ಯಭೂಮಿ. ಇದು**
**ಇವನ ನೋಡಿದ ನಾವು**
**ಧನ್ಯರಾವಿಂದು**

ಕನ್ನಡ ನಾಡಿನ ಸಂತಕವಿಯೆಂದೇ ಖ್ಯಾತರಾದ ಪು.ತಿ.ನ. ಅವರೂ ಕೂಡ ಗಾಂಧೀಜಿಯವರನ್ನು ಕುರಿತು ಕವನಗಳನ್ನು ರಚಿಸಿದ್ದಾರೆ. ಗಾಂಧೀಜಿಯವರ ನೇರ ಪ್ರಭಾವ ವಲಯದಲ್ಲಿ ಇರದಿದ್ದರೂ ಗಾಂಧೀ ತತ್ವಗಳಿಂದ ನಡೆ-ನುಡಿಗಳಿಂದ ಪ್ರಭಾವಿತರಾದ ಅವರು ತಮ್ಮ 'ಗಾಂಧೀಸ್ತವ' ಕವನದಲ್ಲಿ ಗಾಂಧಿಯನ್ನು ಸಾಮಾಜಿಕ ಸುಧಾರಕನೆಂಬಂತೆ ಚಿತ್ರಿಸದೆ, ಹೊಗಳಿಕೆಗೂ ಮಿಗಿಲಾದ ವ್ಯಕ್ತಿತ್ವ ಗಾಂಧೀಜಯವರದು ಎಂದು ಕವಿಮನ ಚಿತ್ರಿಸಿದೆ.

**ಹೊಗಳಲೆ ಹರಿಜನ ಶಾಪ ವಿಮೋಚನ ಕಾರ್ಯವ**
**ಹೊಗಳಲೆ ನಾಡಿನ ನೈಚ್ಯವನಳಿಸಿದ ಕಾರ್ಯವ**
**ಹೊಗಳಲೆ ನರಪಶೂ ಮಾನವನೆನಿಸಿದ ಕಾರ್ಯವ**
**ಹೊಗಳಿಕೆಗೂ ಮಿಗಿಲೀತನ ಕಲ್ಯಾಣಕೃತಿ**

ಎಂಬುದಾಗಿ ಮಹಾತ್ಮನ ನಾನಾ ಕಲ್ಯಾಣಕಾರ್ಯಗಳನ್ನು ಸಾಧಿಸಿದ ವ್ಯಕ್ತಿತ್ವದ ವ್ಯಕ್ತಿಯಾಗಿ ಗಾಂಧೀಜಿಯವರನ್ನು ಚಿತ್ರಿಸಿದ್ದಾರೆ.

ಗಾಂಧಿಯವರು ಹಿಂದುಸ್ಥಾನದ ಜನಕ್ಕೆ ಒಂದು ಸಮ್ಮೋಹನ ಮಂತ್ರ. ಅವರ ಹಾಗೆ ಹಿಂದೂಸ್ಥಾನದ ಹಳ್ಳಿಗಳನ್ನು ತಿರುಗಿದವರು ಯಾರೂ ಇಲ್ಲ. ಕೋಟಿ ಗುಡಿಸಲಲ್ಲಿ ಅವರ ಚಿತ್ರ ಇದೆ. ಕೋಟಿ ಬಾಯಿಂದ ಮಹಾತ್ಮಾ ಗಾಂಧೀಕಿ ಜೈ ಎಂಬ ಹರಕೆ ಸದಾ ಕೇಳಿಸುತ್ತದೆ. ಹೀಗೆ ಗಾಂಧೀಜಿಯವರನ್ನು ಸಾಲಿ ರಾಮಚಂದ್ರರಾಯರ 'ಆಶ್ಚರ್ಯದದ್ಭುತವು' ಕವನ ಗಾಂಧೀಜಿಯ ಚಿತ್ರಣವನ್ನು ಕಟ್ಟಿಕೊಡುತ್ತದೆ.

**ಜ್ಯೋತಿ ಜನಗಣಮಧ್ಯದಿಂದುದಯಿಸಿತು ಪರಂ**
**ಜ್ಯೋತಿ ಅವತರಿಸಿತೀ ಭಾರತದಲಿ**
**ಚೇತರಿಸುತರಿತು ಬೆಳಕಿನೇಳಾತ್ಮ ಬಲವನಿ**
**ನ್ನೇತರದು ಭಯವೆಂದು ಜನವೆದ್ದಿತು**

ಹಿಂಸೆಯನ್ನು ಪ್ರಯೋಗಿಸದೆ ಮಾಡಿದ ಕ್ರಾಂತಿ ವಿಧಾನದ ಮೂಲಕ ಗಾಂಧೀಜಿಯವರು ಜನಮಾನಸದಲ್ಲಿ ಮಹಾತ್ಮರಾದ ಬಗೆಯನ್ನು ಆನಂದಕಂದರ 'ಮಹಾತ್ಮನಿಗೆ' ಕವನ ವಿವರಿಸುತ್ತದೆ. ಸಹಜಯೋಗಿಯಾದ ಗಾಂಧೀಜಿಯವರು ಸ್ನೇಹ, ಪ್ರೀತಿ, ವಿಶ್ವಾಸಗಳ ಗಣಿಯಾಗಿ ಕವಿಗೆ ಗೋಚರಿಸಿದ್ದಾರೆ. ಬರಡಾದ ನೆಲಕೆ ಪನ್ನೀರು ಒದಗಿದಂತೆ ಈ ನಾಡಿನ ಜನರ ಬರಡು ಮನಕೆ ಪನ್ನೀರಾಗುವ ಮೂಲಕ ಚೈತನ್ಯವ ಬಿತ್ತಿದ

ಮಹಾಚೇತನವೆಂದು ಕವಿ ಗಾಂಧೀಜಿಯವರನ್ನು ಚಿತ್ರಿಸುತ್ತಾರೆ.

**ನಿನ್ನ ಉಸಿರದೊಂದೊಂದು ಜಡಕೆ ಜೀವವಿತ್ತಿತೊ**
**ನಿನ್ನ ಧಮನಿಮಿಡಿತವಹಹ ಚೈತನ್ಯವ ಬಿತ್ತಿತೊ**
**ನಿನ್ನ ವಾಣಿ ದಿಗ್‌ದೇಶಕೆ ನನ್ನಿಯನೆಲೆ ತಿಳುಹಿತೊ,**
**ನಿನ್ನ ಗೆಯ್ಮೆ ಸಾವಜೀವಜಂಗುಳಿಯನ್ನುಳುಹಿತೊ...**

ಎನ್ನುವ ಕವಿ ಮುಂದುವರಿದು:

**ನೀನು ನಡೆದ ದಾರಿಯದೇ ಸತ್ಯ ಧರ್ಮಸಾರ**
**ನವನವಿದೋ, ನಮನವಿದೋ, ನಮನ ಸಹಜಯೋಗಿ**

ಎಂದು ಗಾಂಧೀಜಿಯವರ ಸ್ವಭಾವದ ನೇರ ಚಿತ್ರಣವನ್ನು ದಾಖಲಿಸುತ್ತಾರೆ.

ಬೇಂದ್ರೆಯವರು ಜಯ ಜಯಾ ಗಾಂಧೀ ಮೋಹನಾ ಎಂಬ ಕವನದಲ್ಲಿ ಗಾಂಧೀಜಿಯವರ ವ್ಯಕ್ತಿತ್ವದ ಮುಖ್ಯ ಲಕ್ಷಣವನ್ನು ಈ ರೀತಿ ಚಿತ್ರಿಸುತ್ತಾರೆ.

**ನೆನಸೇವು ನಿನ್ನ ಆ ನಗೇ**
**ಒಗೆ ಇಲ್ಲ ಧಗಿ**
**ಬರೇ ಬೆಳಕು - ಬರೇ ಬೆಳಕು**
**ನಿಂ – ಮಾತು ಮಿಂಚಿನಗರಿ**
**ನಿಮ್ಮ ಹೃದಯದಾಗ ಇಲ್ಲ ಪಾಪ.**

ಗಾಂಧೀಜಿಯವರ ಸಹಾನುಭೂತಿಯ ಸಾರ್ವತ್ರಿಕತೆಯನ್ನು “ಬಾಪೂಜಿಗೆ” ಕವನದಲ್ಲಿ ಒಂದೇ ವಾಕ್ಯದಲ್ಲಿ ಕವಿ ಅರ್ಚಿಕ ವೆಂಕಟೇಶರು ಹೀಗೆ ಬಣ್ಣಿಸಿದ್ದಾರೆ.

**ಜಗದಗಲ ಮುಗಿಲಗಲ**
**ನಿನ್ನ ಮನ ಭಾವನಾ**

ತಮ್ಮ ಗಾಂಧಿ ಗಾಥಾ ಕವನದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಹೀಗೆ ಪ್ರಶ್ನಿಸುತ್ತಾರೆ:

**ಸತ್ಯ ನಿರ್ಮಲ ಶಾಂತಮೂರ್ತಿ! ನಿಮ್ಮ**
**ಪುಣ್ಯ ಜನ್ಮೋದಯದ ಮಂಗಲೋತ್ಸವದಂದು**

ಗಾಂಧೀಜಿಯಲ್ಲಿ ದೈವತ್ವದ ಕಲ್ಪನೆ ಇಲ್ಲದವರು ಕಲ್ಪನಾ ವ್ಯಕ್ತಿಯೊಬ್ಬನ ಸುತ್ತ ಪವಾಡಗಳ ಬಲೆಯನ್ನು ನೆಯ್ದು, ಜನರ ಅಜ್ಞಾನವನ್ನು ಬಂಡವಾಳ ಮಾಡಿಕೊಂಡು, ಅವರನ್ನು ಶೋಷಿಸುತ್ತಾರೆ. ರಾಜಕೀಯಕ್ಕೆ ಬಳಸಿಕೊಳ್ಳುತ್ತಾರೆ. ದೇವರ ಹೆಸರಿನಲ್ಲಿ ಜನರನ್ನು ವಂಚಿಸುತ್ತಾರೆ. ಆದರೆ ನಿಜವಾದ ದೇವತಾ ಸ್ವರೂಪಿಯಾದ ಗಾಂಧೀಜಿಗೆ ಸರಳ ಜೀವನದ ದೇವತ್ವದಾರಾಧನೆಗೆ ಜನರನ್ನೆಚ್ಚರಿಸುವುದೇ ಗಾಂಧೀಜಿಯ ಸಕಲ ಪ್ರಯತ್ನಗಳ ಉದ್ದೇಶ ಎಂದು ಕವಿ ಕುವೆಂಪು ತಮ್ಮ “ಸಭತ್ಯಾದೇವತೆ ” ಕವನದಲ್ಲಿ ಚಿತ್ರಿಸುತ್ತಾರೆ.

ಮುಂದುವರಿದು ಜಗತ್ತಿನ ಎಲ್ಲೆಡೆಯಲ್ಲಿಯೂ ಮಾನವ ದಾನವನಂತೆ ವರ್ತಿಸುವ ಸಂದರ್ಭದಲ್ಲಿ ಬುದ್ಧ, ಕ್ರಿಸ್ತ, ಗಾಂಧಿಯಂಥವರು ತ್ಯಾಗ ತಪಸ್ಸುಗಳ ಮೂಲಕ ಜನರನ್ನು ನೈತಿಕತೆಯ ಕಡೆಗೆ ಆಕರ್ಷಿಸುತ್ತಿರುವುದಲ್ಲದೆ, ಎಲ್ಲೆಲ್ಲೂ ದೈವೀಪ್ರಜ್ಞೆಯ ಬೆಳಕನ್ನು

ಚಿಮ್ಮಿಸುತ್ತಾರೆ.

**...ಮಾನವನ ಅಭ್ಯುದಯ**
**ಶ್ರೇಯಸ್ಸುಗಳಿಗಾಗಿ ನೊಂದವರ್, ಬೆಂದವರ್**
**ಮನುಜರಂತೆಯೆ ಬಾಳಿ ಹೋರಾಡಿ ಸಂದವರ್,**
**ರಾಜ್ಯ ಭೋಗ ತ್ಯಾಗದಮಲ ವೈರಾಗಿಗಳ್,**
**ಮನುಜತನುಜರ್ ಇಂದು ಕ್ರಿಸ್ತ ಬುದ್ಧಾದಿಗಳೆ**
**ಮಾನವರ ಪೂಜೆ ಗೌರವಗಳನು ಕೈಕೊಳ್ವ**
**ದೇವತೆಗಳಾಗುವ ಕಾಲವೈ ತಂದಿಹುದು**

ಎನ್ನುತ್ತಲೇ ಹೌದು, ಹಳೆಯ ದೇವತೆಗಳ ಕೆಲಸ ಮುಗಿದಿದೆ. ಅವರೀಗ ಕಲ್ಲಾಗಿ ಬಣ್ಣದ ಬೊಂಬೆಗಳಾಗಿ ಮ್ಯೂಸಿಯಂ ಸರಕುಗಳಾಗಿವೆ. ಸತ್ತ ಕಲ್ಲುಗಳ ಮುಂದೆ ಅತ್ತು ಕರೆದು ಸಾಕಾಗಿದೆ. ಜಗತ್ತಿನ ಜೀವ ಜಾಲದ ಕ್ಷೇಮಕ್ಕಾಗಿ ತಮ್ಮನ್ನು ತೆತ್ತುಕೊಂಡಿರುವ ಗಾಂಧಿಯವರೇ ನಮ್ಮ ದೇವರು.

**ಋಜು ದೃಷ್ಟಿ ದೊರೆ ಕೊಳಲ್ ಮೂರು ಯುಗಗಳ್ ಕಳೆದು**
**ಕಲಿಕಾಲ ಬೇಕಾಯ್ತು! ಧನ್ಯ, ಕಲಿಯು ಧನ್ಯ**

ಎಂದು ಕವಿ ಕೃತಜ್ಞತೆಯಿಂದ ಭಾವುಕರಾಗುತ್ತಾರೆ. ಮಾನವನ ಅಭ್ಯುದಯ ಶ್ರೇಯಸ್ಸುಗಳಿಗಾಗಿ ನೊಂದವರು, ಬೆಂದವರು, ಮನುಜರಂತೆಯೇ ಬಾಳಿ ಹೋರಾಡಿ ಸಂದವರು, ವೈರಾಗಿಗಳು ಮಾತ್ರ ವಿಜ್ಞಾನಯುಗದಲ್ಲಿ ಆರಾಧ್ಯರಾಗುತ್ತಾರೆ.

ಮನುಜ ತನುಜರಾದ ಇವರೂ ಕ್ರಿಸ್ತ, ಬುದ್ಧರಂತೆ ಮಾನವರ ಪೂಜೆ, ಗೌರವಗಳಿಗೆ ಪಾತ್ರರಾಗುತ್ತಾರೆ. 1934ರ ಹೊತ್ತಿಗಾಗಲೇ ಗಾಂಧೀಜಿ ಭಾರತೀಯರ ಹೃದಯ ಸಿಂಹಾಸನದಲ್ಲಿ ಆಸೀನರಾಗಿದ್ದರೆಂಬುದಕ್ಕೆ ಈ ಕವಿತೆಯೇ ಸಾಕ್ಷಿಯಾಗಿದೆ.

ಸತ್ಯಾಗ್ರಹ ಸಿದ್ಧಾಂತದ ಸ್ವರೂಪ, ಲಕ್ಷಣ, ದರ್ಶನ, ತಂತ್ರ ಮತ್ತು ಪ್ರಾಯೋಗಿಕ ವಿಧಾನಗಳನ್ನು ಗಾಂಧೀ ಜೀವನದ ಘಟನೆಗಳನ್ನು ಆಧಾರವಾಗಿಟ್ಟುಕೊಂಡು 'ಸತ್ಯಾಗ್ರಹಿ' ಎಂಬ ಕವಿತೆಯಲ್ಲಿ ಕುವೆಂಪು ವಿವರಿಸುತ್ತಾರೆ. ಗಾಂಧೀಜೀವನ ಮತ್ತು ಸತ್ಯಾಗ್ರಹ ಅಭಿನ್ನವಲ್ಲವೆಂಬುದು ಸರ್ವವೇದ್ಯ. ಅವರ ಜೀವನವೇ ಸತ್ಯಾಗ್ರಹದ ಪ್ರಯೋಗ ಮಂದಿರವಾಗಿತ್ತೆಂಬ, ಅವರೇ ಅದರ ಜನಕರೆಂಬ ಹಾಗೂ ವ್ಯಾಖ್ಯಾನಕಾರರೆಂಬ ನಿಜವೂ ಈ ಕವಿತೆಯಿಂದ ವ್ಯಕ್ತವಾಗುತ್ತದೆ.

**ಮರೆಯದೆಯೆ ಹಡೆದ ಮಾತೆಯ ಸೇವೆಯನು ಮಾಡಿ**
**ಮೌನದಿಂ ಮಡಿವವನು ಧನ್ಯ ಸತ್ಯಾಗ್ರಹಿ!**
**ಕಲಿಯುಗದ ಪ್ರಚ್ಛನ್ನ, ಕಲ್ಕಿ ಸತ್ಯಾಗ್ರಹಿ**

ನಿಜವಾದ ಸತ್ಯಾಗ್ರಹಿ ಗಾಂಧಿಯೊಬ್ಬರೇ; ಗಾಂಧೀಜಿಯ ಅನುಯಾಯಿಯೂ ಗಾಂಧೀಜಿಯೇ ಸರಿ. ಇಲ್ಲಿ ಕವಿ ಸತ್ಯಾಗ್ರಹ ಸಿದ್ಧಾಂತದ ಮಹಾವ್ಯಾಖ್ಯಾನಕ್ಕೆ ಗಾಂಧೀಜಿಯವರೆ ವಸ್ತುವಾಗಿ ವಿಜೃಂಭಿಸಿದ್ದಾರೆನ್ನಬಹುದು. ಗಾಂಧೀಜಿಯವರ ಪ್ರಬಲ ಅಸ್ತ್ರಗಳಲ್ಲಿ ಒಂದಾದ ಸತ್ಯಾಗ್ರಹ ಕುರಿತು ಕುವೆಂಪು ಬರೆದಿರುವುದು ಅವರ ಪ್ರಭಾವವನ್ನು

ಬಿಂಬಿಸುತ್ತದೆ.

ಸ್ವಾತಂತ್ರ್ಯಪೂರ್ವ ನವೋದಯ ಕವಿಗಳಿಗೆ ಗಾಂಧೀಯೆಂಬ ಹೆಸರೇ ನಾಂದಿಯಾಗಿದೆ. ಭಾರತೀಯ ಜೀವನಕ್ಕೆ ಗಾಂಧೀಗೀತವೇ ಸುಪ್ರಭಾತ ಗೀತವಾಗಿದೆ. ಭಾರತೀಯರಿಗೆ, ಉಜ್ವಲವಾದ, ರಾಷ್ಟ್ರೀಯತೆಯನ್ನುಳ್ಳ ಈ ಕಾಲದ ಕವಿಗಳಿಗೆ ಗಾಂಧೀಜಿಯವರು ಪಾಲಿಸಿಕೊಂಡು ಬರುತ್ತಿದ್ದ ಮೌಲ್ಯಗಳಾದ ಸತ್ಯ, ಸರಳಜೀವನ, ತ್ಯಾಗ, ಮಾನವ ಪ್ರೇಮ, ವ್ಯಕ್ತಿ ಮತ್ತು ಸಮಾಜದ ನಡುವೆ ಅನನ್ಯ ಸಂವಾದ ಸಾಮರಸ್ಯ ಸ್ಥಾಪಿಸುವುದೇ ಮುಂತಾದ ಮೌಲ್ಯಗಳು ನವೋದಯ ಕವಿಗಳ ಅಂತರಂಗಕ್ಕೆ ನೇರವಾಗಿ ನಾಟಿ ಅವರ ಪ್ರಭಾವಲಯದಲ್ಲಿ ಇಳಿಯಲು ಸಾಧ್ಯವಾಯಿತು. ಹೀಗೆ ಸ್ವಾತಂತ್ರ್ಯಪೂರ್ವದ ಸಂದರ್ಭದಲ್ಲಿ ಪ್ರಚೋದಕ ಗೀತೆಗಳು ರಚನೆಗೊಂಡಿರುವುದರ ಜೊತೆಗೆ ಗಾಂಧೀ ಪ್ರಭಾವ ನಿಚ್ಚಳವಾಗಿ ಮೆಲ್ಲ ಮೆಲ್ಲಗೆ ಹರಿದು ಬರುತ್ತಿರುವುದನ್ನು ತೋರುವ ಕವನಗಳನ್ನು ಗುರುತಿಸಬಹುದು. 1924ರಲ್ಲಿ ಪುಣಿಂಚತ್ತಾಯರು 'ಗಾಂಧೀ ವಿಜಯ' ಎನ್ನುವ 101ನುಡಿಗಳ ನೀಳ್ಗವಿತೆ ಬರೆದಿರುವುದನ್ನು ಗಮನಿಸಿದರೆ ಆ ಕಾಲದ ಕವಿಗಳ ಮೇಲೆ ಗಾಂಧೀಜಿಯ ಪ್ರಭಾವ ಎಷ್ಟರ ಮಟ್ಟಿಗೆ ವಸ್ತುವಾಯಿತು ಎಂಬುದನ್ನು ಕಾಣಬಹುದು.

ಅಜ್ಞಾತ ಕವಿಯೋರ್ವನು ಗಾಂಧೀಜಿಯ ಪ್ರಭಾವಲಯಕ್ಕೆ ಒಳಗಾಗಿ ಹೀಗೆ ಬರೆಯುತ್ತಾನೆ:

**ಕೂಗಿತ್ತೈ ಮಹಾಗಾಂಧಿ ಕೋಗಿಲೇ || ಕೈಮೀರಿತೆನುತಲೇ**
**ಕೂಗಿ ಕತ್ತಲೆಯು ಸಾಗುವ ಸಮಯದಿ | ತೂಗಿ ಬೇಗನೆಂದಾಗಸದಲೆ**
**ಮುಚ್ಚಿರುವ ಮುಸುಕನ್ನು ತೆಗೆದೊಗೆದು | ಕತ್ತಲೆಯನು ಕಳೆದ**
**ಸ್ವಚ್ಛವಾದ ಸತ್ಯಾಗ್ರಹ ತತ್ವವ | ಬಿಚ್ಚಿ ನೋಡಿಚ್ಚರವೆಂದೆನಂತಲೆ**

ಗಾಂಧೀಜಿಯವರನ್ನು ಮತ್ತು ಅವರ ತತ್ವ ಆದರ್ಶಗಳನ್ನು ನೆಚ್ಚಿಕೊಂಡ ಕನ್ನಡ ಕವಿಗಳು ಅವನ್ನು ಕನ್ನಡ ಜನತೆಗೆ ತಮ್ಮದೇ ಬರಹಗಳ ಮೂಲಕ ಹಂಚುವ ಕಾರ್ಯ ಮಾಡಿದರು. ಅವರಲ್ಲಿ ಶ್ರೀಕಂಠಶಾಸ್ತ್ರಿಗಳು ಒಬ್ಬರೂ. ಗಾಂಧಿ ಪ್ರಭಾವಕ್ಕೆ ಒಳಗಾದ ಇವರು ಲೇಖನಿಯಿಂದ ಹಲವಾರು ಕವನಗಳು ಹೊರಬಂದಿವೆ. ಅಲ್ಲೆಲ್ಲಾ ಇವರು ಗಾಂಧಿ ತತ್ವಗಳನ್ನು, ಗಾಂಧೀಜಿಯ ಮಹಿಮೆಯನ್ನು ವಸ್ತುವಾಗಿಸಿಯೇ ಕವನಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ವಂದೇಮಾತರಂ', 'ಮೋದವ ಪಡೆಯಿರಿ', 'ಚಿತ್ತವಿಟ್ಟುಕೇಳಿರಿ' ಮುಂತಾದವು ಬಹಳ ಪ್ರಮುಖವಾದ ಕವನಗಳಾಗಿವೆ.

ಚಿತ್ತವಿಟ್ಟುಕೇಳಿರಿ ಕವನದಲ್ಲಿ ಕವಿಯೇ ಹೇಳುವಂತೆ:

**ಚಿತ್ತವಿಟ್ಟು ಕೇಳಿರಿ ಶಿಸ್ತಿನ ಮೋಹರಂಥ ಕಥನಾ**
**ಮತ್ಸ್ಯಲೋಕದೊಳಗವತರಿಸಿದ ಗಾಂಧಿ - ಪೈಗಂಬರರು ||**
**ನಡೆಸಿದ ಶಾಂತಿ ಯುದ್ಧವನು |**
**ಇಂಗ್ಲೀಷರ ಕಪಟ ತಂತ್ರವನು**
**ಸ್ವರಾಜ್ಯ ಸಂಪಾದನ ವ್ರತಧಾರಿಯಾಗಬೇಕಾ**
**ಹಿಂದುಸ್ತಾನವ ತರುಣವೀರರು ಟೊಂಕ ಕಟ್ಟಬೇಕಾ**

ಎಂದು ಗಾಂಧಿಯ ಅಹಿಂಸೆಯ ಹೋರಾಟಕ್ಕೆ ಜನಮನವನ್ನು ಸಜ್ಜುಗೊಳಿಸಲು ಅವರ ಹೆಸರಿನ ಕಥನ ಕಟ್ಟಿ ಅವರ ಶಾಂತಿಮಂತ್ರ ಅಹಿಂಸೆಯ ತತ್ವಗಳನ್ನು ಸ್ವರಾಜ್ಯ ಸಂಪಾದನೆಯ ಸಾಧನೆಗೆ ಪ್ರೇರೇಪಿಸುವ ರೀತಿಯಲ್ಲಿ ಕವನಗಳನ್ನು ರಚಿಸಿರುವುದನ್ನು ಕಾಣಬಹುದಾಗಿದೆ.

ದೇಶಕ್ಕಾಗಿ ಗಾಂಧಿಯವರು ತಮ್ಮನ್ನು ತಾವು ಅರ್ಪಿಸಿಕೊಂಡು ಸ್ವಾತಂತ್ರ್ಯ ಚಳವಳಿಗೆ ಧುಮುಕಿದ ಸಂದರ್ಭದಿಂದ ಸ್ಫೂರ್ತಿಗೊಂಡ ಎನ್. ವಿಷಕಂಠರಾವ್‌ರಂತ ಕವಿಗಳು ಗಾಂಧೀಜಿಯವರನ್ನು ಕುರಿತು ಈ ಬಗೆಯಾಗಿ ಚಿತ್ರಿಸುತ್ತಾರೆ. ತಮ್ಮ "ನಿಷ್ಕಾಮ ಕರ್ಮಯೋಗಿ" ಕವನದಲ್ಲಿ:

**ಜೈ ದೇಶಹಿತಾರ್ಪಿತ ಗಾಂಧಿ**
**ಮಹಾತ್ಮ ಭಾರತ ಮಾತೆಯ ಜೀವಾತ್ಮಾ**
**ಪರಮ ಧರ್ಮವು ಅಹಿಂಸೆಯೆಂದು**
**ಭರತಖಂಡಕದೆ ಜೀವನವೆಂದು**
**ಸರಳತೆ ಸಮತೆಯ ಉಸುರಿದೆ ಬಂದು**
**ಗಾಂಧಿಯೆಂಬ ಅಭಿದಾನದಿ ಬಂದು**

ಎಂಬುದಾಗಿ ಚಿತ್ರಿಸಿದ್ದಾರೆ. ಗಾಂಧೀಜಿಯವರ ಸರಳ ಬದುಕಿಗೆ ಮಾರುಹೋದ ಹಲವು ಕವಿಗಳು ಅವರಿಗೆ ಶರಣು ಎನ್ನುವ ಮೂಲಕ ಅವರ ಸರಳತ್ವವನ್ನು ಜನರಿಗೆ ಬೋಧಿಸಲು ಅವರ ಮೇಲೆಯೇ ಅನೇಕ ಕವನಗಳನ್ನು ಬರೆದರು. ಅವರಲ್ಲಿ ಶ್ರೀಧರ ಖಾಣೋಲ್ಕರ್ ಎನ್ನುವ ಕವಿಗಳು ಒಬ್ಬರು. ಅವರು "ಶರಣು ಮೋಹನದಾಸನಿಗೆ " ಎಂಬ ಕವನದಲ್ಲಿ:

**ಶರಣು ಮೋಹನದಾಸಗೆ ಶರಣು**
**ಶರಣು ಮೋಹನದಾಸಗೆ**
**ಶರಣು ಕರುಣವ ಸುರಿವ ತರಣಿಗೆ**
**ಶರಣು ಭಾರತ ತನಯಗೆ**

ಎಂದು ಗಾಂಧೀಜಿಯವರನ್ನು ಚಿತ್ರಿಸಿದ್ದಾರೆ. ತಿಪ್ಪಯ್ಯ ಅವರು:

**ದೇಶದೇಶಗಳಲ್ಲಿ ದೇವರೆನಿಸುವ ಗಾಂಧಿ**
**ಕೋಶಕೋಶಗಳಲ್ಲಿ ಅಮ್ಮ ಗಾಂಧಿ**
**ದಾಸರಿಗೆ ನಿತ್ಯದಲಿ ಭಾಸವಾಗುವ ಗಾಂಧಿ**
**ವಾಸವಾಗಿಹ ಹೃದಯ ಪಟಲದಲ್ಲಿ ಗಾಂಧಿ**

ಎಂದು ಚಿತ್ರಿಸುವ ಮೂಲಕ ಗಾಂಧಿಯ ಬಗ್ಗೆ ತಮಗಿರುವ ಅಪಾರ ಪ್ರೀತಿ, ಅಭಿಮಾನವನ್ನು ಹೊರಹೊಮ್ಮಿಸಿದ್ದಾರೆ.

'ಭಾರತ ಭೂಮಿಯ ಪ್ರಾರ್ಥನೆ' ಎಂಬ ಕವನದಲ್ಲಿ ಬವಳಾಡಿ ಹಿರಿಯಣ್ಣ ಹೆಬ್ಬಾರರು ಗಾಂಧಿ ಮಹಾತ್ಮನನ್ನು ಸತ್ವಧರ್ಮಗಳ ಅನನ್ಯ ಶಕ್ತಿ ಗಾಂಧಿ ಎಂದು ಚಿತ್ರಿಸುತ್ತಾರೆ.

**ನಾವು ನಮ್ಮ ಜಾತಿ ವೈರವಿಲ್ಲದೈಕ್ಯ ರೀತಿಯಿಂದ**

**ವಾಂಛಿತಾರ್ಥ ಜಾತವಾಗುವಂಥ ಕಾರ್ಯವ**
**ತಿಳುಹುವಂತೆ ನಿಷ್ಠೆಯಿಂದ. ಐಕ್ಯತೆಯನು**
**ಸಲಿಸು ಸಕಲ ಮನುಜರಿಗೆ**

ಎಂದು ಹಾಡಿ ಹೊಗಲಳಿ ಗಾಂಧಿಯನ್ನು ಗುಣಗಾನ ಮಾಡಿದ್ದಾರೆ. ಪುಂಡೂರು ಲಕ್ಷ್ಮಿನಾರಾಯಣ ಪುಣಿಂಚತ್ತಾಯರಂತು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಹಲವಾರು ಕವನಗಳನ್ನು ರಚಿಸಿದ್ದಾರೆ. ಅವೆಲ್ಲವೂ ಗಾಂಧಿತತ್ವಗಳನ್ನು ಸಮರ್ಥವಾಗಿ ಕಟ್ಟಿಕೊಡಬಲ್ಲ ಕವನಗಳಾಗಿವೆ. ಅವುಗಳಲ್ಲಿ 'ಉಪ್ಪಿನಕದನ', 'ಖಾದಿಯಹಾಡು', 'ಹರಿಜನ ಸಂಧಾನ', 'ದರ್ಶನ' ಬಹಳ ಮುಖ್ಯವಾದ ಕವನಗಳಾಗಿವೆ. ಗಾಂಧಿಯವರ ಸ್ವದೇಶಿ ಉತ್ಪನ್ನ ಕರೆಯಿಂದ ಜಾಗೃತರಾದ ಕವಿ ಸ್ವದೇಶಿ ಉಡುಪನ್ನು ಧರಿಸಿರಿ ಎಂದು ಕರೆಯಿಡುವ "ಖಾದಿಯ ಹಾಡು" ಕವನ ಗಾಂಧೀಜಿಯವರ ಖಾದಿ ಉಡುಪಿಗೆ ನೀಡಿದ ಮನ್ನಣೆಯನ್ನು ತಿಳಿಸುವ ಕವನವಾಗಿದೆ.

**ಪರ ದೇಶದ ಬಟ್ಟೆಯ ಬಿಡು ಬಿಡು**
**ಸುಡು ಸುಡು "ದೇಶಬಂಧು"**
**ಸ್ವರ್ಣ ಧರಣಿಯಾ ಸ್ವರ್ಣವನೆಲ್ಲವ**
**ಪೂರ್ಣ ವಿದೇಶಿ ವಸ್ತುಕೆ ಕೊಡುವ**
**ಕರ್ಣ ಕಠೋರ ವಿಚಾರವ ಸುಡುಸುಡು**

ಹೀಗೆ ಸ್ವಾತಂತ್ರ್ಯಪೂರ್ವದ ಬಹುತೇಕ ನವೋದಯ ಕವನಗಳಲ್ಲಿ ಹರಡಿಕೊಂಡ ಗಾಂಧಿ ಛಾಯೆ ಹೆಚ್ಚು ದಟ್ಟವೂ ಸಾಂದ್ರವೂ ಆಗಿರುವುದಲ್ಲದೆ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿರುವುದು ಉಲ್ಲೇಖಾರ್ಹ. ಈ ಸಂದರ್ಭದಲ್ಲಿ ಕವಿಗಳು ಪ್ರದರ್ಶಿಸುವ, ರಾಷ್ಟ್ರೀಯತೆಯ ಶೈಲಿ ಸ್ವಾತಂತ್ರ್ಯ ಹೋರಾಟದ ಮುಖ್ಯವಾಹಿನಿಯಲ್ಲಿ ಜನತೆಯನ್ನು ತೊಡಗಿಕೊಳ್ಳುವ ಉದ್ದೇಶವನ್ನು ಮಾತ್ರ ಹೊಂದಿರದೆ, ಪರತಂತ್ರ ವ್ಯವಸ್ಥೆಯಿಂದಾದ ಸಮಸ್ಯೆಗಳ ವಿವಿಧ ಮಗ್ಗಲುಗಳನ್ನು ಬಿಚ್ಚಿಡುತ್ತಾರೆ. ಅದಕ್ಕೆ ಪರಿಹಾರಗಳನ್ನೂ ಗಾಂಧಿ ಪ್ರಣೀತ ನೆಲೆಯಲ್ಲಿಯೇ ಸೂಚಿಸುತ್ತಾರೆ. ಪರಿಹಾರ ಕಂಡುಕೊಳ್ಳದೆ ಹೋದರೆ ಆಗಬಹುದಾದ ಅನಾಹುತಗಳ ಬಗ್ಗೆ ಸೂಚ್ಯವಾಗಿ ಎಚ್ಚರಿಸುತ್ತಾರೆ.

ಸ್ವಾತಂತ್ರ್ಯಪೂರ್ವದ ನವೋದಯದ ಕನ್ನಡ ಕವನಗಳಲ್ಲಿ ಗಾಂಧೀ- ಗಾಂಧೀವಾದ ಕೇಂದ್ರವಸ್ತುವಾಗುವುದನ್ನು ನೋಡಿದರೆ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿಯ ಮೇಲೆ ಗಾಂಧಿ ಪ್ರಭಾವದ ಗಾಢತೆಯ ಅರಿವಾಗುತ್ತದೆ. ಗಾಂಧಿ ಕವಿಮನದ ದೇವರಾಗಿಬಿಟ್ಟರು. ಜನಮನದ ದೇವತಾಮನುಷ್ಯರಾದರು, ಶಾಂತಿದೂತರಾದರು, ಪ್ರವಾದಿಯಾದರು. 1920ಕ್ಕೆ ಹೊತ್ತಿಕೊಂಡ ಗಾಂಧಿಪ್ರಭಾವ ಸತ್ತ ಮೇಲೂ ಜೀವಂತವಾಗಿದೆ. ಗಾಂಧಿ ಪ್ರಭಾವ ಸಂಪೂರ್ಣವಾಗಿ ನಂದಿಹೋಗುವುದು ಸಾಧ್ಯವೇ ಇಲ್ಲ ಎಂಬುವಷ್ಟರಮಟ್ಟಿಗೆ ಇತಿಹಾಸದಲ್ಲಿ ಸೇರಿಕೊಂಡಿದೆ.

**ಈ ಮಹಾ ಸ್ವಾತಂತ್ರ್ಯ ರಣಯಾಗ ಧೂಮದಲಿ**
**ಶ್ವೇತಾಗ್ನಿ ಜ್ವಾಲೆಯೊಂದುರಿಯುತಿದೆ; ನಿಶ್ಚಲಂ**
**ರಂಜಿಸುತ್ತಿದೆ. ಶಾಂತಿಯಲಿ ಹಿಮ ಮಹಾಚಲಂ**

ರಾರಾಜಿಸುವಂತೆ ನೀಲಿಮ ನಭೋರಾಯದಲಿ

ಎಂದು ಕುವೆಂಪು ಚಿತ್ರಿಸುವಂತೆ ಗಾಂಧೀಜಿಯವರು ಸ್ವಾತಂತ್ರ್ಯಪೂರ್ವ ನವೋದಯ ಕಾವ್ಯ ಸಂದರ್ಭದಲ್ಲಿ ಕವಿಗಳ ಮನ್ನಣೆಗೆ ಪಾತ್ರರಾಗಿದ್ದಾರೆ. ಇಂಥ ಅದ್ಭುತ ಶಕ್ತಿಯ ಐಹಿಕ ರೂಪ ಮರೆಯಾಗಿ ಪಂಚಭೂತಗಳಲ್ಲಿ ಒಂದಾಗಿ ಹೋಗಿರಬಹುದು. ಆದರೆ ಆ ಅಸಮಾನ್ಯ ಶಕ್ತಿ ಮನುಕುಲದ ಮೇಲೆ ಬೀರಿದ ಪ್ರಭಾವ ಎಂದಿಗೂ ಅಚ್ಚಳಿಯದೆ ಚಿರಂತನವಾಗಿ ಉಳಿಯುವಂಥದ್ದು.

## ಆಕರ ಗ್ರಂಥಗಳು:


1. ಭಟ್ಟ ಪ. ಶು. (ಸಂ). (1952). ಅಮರನಾದೈ ತಂದೆ. ಗೆಳೆಯರ ಗುಂಪು. ಉತ್ತರ ಕನ್ನಡ.
2. ಶಿವಾರೆಡ್ಡಿ ಕೆ. ಸಿ. (ಸಂ) (2000). ಕುವೆಂಪು ಸಮಗ್ರ: ಕಾವ್ಯ ಭಾಗ–1. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ.
3. ಚಂದ್ರಶೇಖರ ಪಾಟೀಲ (ಸಂ). (1998). ಗಾಂಧಿ ಎಂಬುವ ಹೆಸರು. ಶಶಿಕಲಾ ವೀರಯ್ಯಸ್ವಾಮಿ. ಬೆಂಗಳೂರು.
4. ರಾಯಧಾರವಾಡಕರ (ಸಂ). (1960). ಬಾಪೂ ಕಾವ್ಯಾಂಜಲಿ. ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ. ಧಾರವಾಡ.
5. ಸೂರ್ಯನಾಥ ಕಾಮತ್ (ಸಂ). (1998). ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.